[Govt. of Karnataka C.R.P. 67]

| Deposition Sheets (RP.No.57) Form No.4 (Civil) |
|---|

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 356/2023**

**.................................................Vs....................................**

ಸಾಕ್ಷಿದಾರನ ಹೆಸರು ಃ ಟಿ ಡಿ ನಾಗರಾಜ್ ಪಿ.ಡಬ್ಲ್ಯೂಃ 9

ತಂದೆಯ ಹೆಸರುಃ ಟಿ ಸಿ ಧರ್ಮಪ್ಪ ಸಿ.ಡಬ್ಲ್ಯೂಃ 24

ಪ್ರಾಯ ಃ 46 ವರ್ಷ

ಉದ್ಯೋಗ ಃ ಪೊಲೀಸ್ ನಿರೀಕ್ಷಕರು ಕಂಕನಾಡಿ ಪೊಲೀಸ್ ಠಾಣೆ

ವಾಸ ಃ ಮಂಗಳೂರು

ದಿಃ 16-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನಾನು ಡಿಸೆಂಬರ್ 2022 ರಿಂದ ಫೆಬ್ರವರಿ 2024 ರವರಿಗೆ ಕಾರ್ಕಳ ವೃತ ನೀರಿಕ್ಷಕರಾಗಿ ಕಾರ್ಕಳ ವೃತದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 15-12-2023 ರಂದು ಚಾಸಾ-23 ರವರಿಂದ ಕಡತವನ್ನು ಸ್ವೀಕರಿಸಿ ತನಿಖೆಯನ್ನು ಮುಂದುವರಿಸಿರುತ್ತೇನೆ. ನಂತರ ಅದೇ ದಿನ ಘಟನಾ ಸ್ಥಳದ ಮಹಜರನ್ನು ತಯಾರಿಸಲು ಚಾಸಾ-8 ಮತ್ತು 9 ರವರಿಗೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ನಂತರ ಘಟನಾ ಸ್ಥಳಕ್ಕೆ ತೆರಳಿದ್ದು, ಅಲ್ಲಿ ಹಾಜರಿದ್ದ ಚಾಸಾ-8 ಮತ್ತು 9 ರವರ ಸಮಕ್ಷಮ ಚಾಸಾ-1 ರವರು ತೋರಿಸಿಕೊಟ್ಟಂತೆ ಸಂಜೆ 5.30 ಗಂಟೆಯಿಂದ 6.30 ರವರೆಗೆ ಘಟನಾ ಸ್ಥಳದ ಮಹಜರು ಹಾಗೂ ನಕಾಶೆ ತಯಾರಿಸಿ, ಅಪಘಾತಕ್ಕೆ ಸಂಬಂಧಿಸಿದ ಆಟೋರಿಕ್ಷಾ ಮತ್ತು ದ್ವಿಚಕ್ರ ವಾಹನ ಹಾಗೂ 1 ಹೆಲ್ಮೆಟನ್ನು ಸ್ವಾಧೀನಪಡಿಸಿಕೊಂಡಿರುತ್ತೇನೆ. ಸ್ಥಳದಲ್ಲಿ ಭಾವಚಿತ್ರ ತೆಗೆದಿರುತ್ತೇನೆ. ನಂತರ ಸ್ಥಳ ಮಹಜರು ಹಾಗೂ ನಕಾಶೆಗೆ ಪಂಚರ ಸಹಿ ಪಡೆದುಕೊಂಡಿರುತ್ತೇನೆ. ನಂತರ ಚಾಸಾ-1 ಮತ್ತು 4 ರವರ ಮರು ಹೇಳಿಕೆಯನ್ನು ಹಾಗೂ ಚಾಸಾ-2 ಮತ್ತು 3 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಸೊತ್ತುಗಳೊಂದಿಗೆ ಠಾಣೆಗೆ ಬಂದು ಠಾಣಾ ಪಿ.ಎಫ್.ನಂ. 209/2022, 214/2022

ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಚಾಸಾ-12 ರವರ ಹೋಟೇಲ್ ನಲ್ಲಿ ಅಳವಡಿಸಿದ ಸಿ.ಸಿ.ಟಿವಿ ಕ್ಯಾಮರಾದ ದೃಶ್ಯಾವಳಿಗಳನ್ನು ಹಾಜರುಪಡಿಸುವಂತೆ ನೋಟೀಸು ನೀಡಿರುತ್ತೇನೆ. ನಂತರ ದಿಃ 18-12-2022 ರಂದು ಚಾಸಾ-12 ರವರು ಠಾಣೆಗೆ ಹಾಜರಾಗಿ ತಮ್ಮ ಹೋಟೇಲ್ ನ ಸಿ.ಸಿ.ಟಿವಿ ಕ್ಯಾಮರಾದಲ್ಲಿ ಸೆರೆಯಾಗಿದ್ದ ದೃಶ್ಯಾವಳಿಗಳನ್ನು ಪೆನ್ ಡ್ರೈವ್ ಗೆ ಹಾಕಿ ಹಾಜರುಪಡಿಸಿದ್ದು, ಅದನ್ನು ಠಾಣೆಯಲ್ಲಿದ್ದ ಕಂಪ್ಯೂಟರ್ ಗೆ ಹಾಕಿ ದೃಶ್ಯಾವಳಿಗಳನ್ನು ನೋಡಿ ನಂತರ ಚಾಸಾ-10 ಮತ್ತು 11 ರವರ ಸಮಕ್ಷಮ ಮಧ್ಯಾಹ್ನ 1.00 ಗಂಟೆಯಿಂದ 1.30 ಗಂಟೆವರೆಗೆ ಸೊತ್ತು ಸ್ವಾಧೀನತಾ ಮಹಜರು ಮುಖೇನ ಸದ್ರಿ ಪೆನ್ ಡ್ರೈವ್ ನ್ನು ಸ್ವಾಧೀನಪಡಿಸಿಕೊಂಡಿರುತ್ತೇನೆ. ಅದನ್ನು ಠಾಣಾ ಸೊತ್ತು ಪಟ್ಟಿ ಸಂಖ್ಯೆ 212/2022 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಈ ಬಗ್ಗೆ ಚಾಸಾ-12 ರವರಿಂದ ಭಾರತೀಯ ಸಾಕ್ಷ್ಯ ಕಾಯಿದೆ ಕಲಂ 65(ಬಿ) ಅಡಿಯಲ್ಲಿ ಪ್ರಮಾಣ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅವಡಿಸಿಕೊಂಡಿರುತ್ತೇನೆ.

ದಿಃ 22-12-2022 ರಂದು ಮೃತರ ಮರಣೋತ್ತರ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 27-12-2022 ರಂದು ದ್ವಿಚಕ್ರ ವಾಹನ ನೊಂದಣಿ ಸಂಖ್ಯೆ ಕೆ.ಎ.20 ಇ.ಕ್ಯೂ.0260 ಮಾಲೀಕರಿಗೆ ಐ.ಎಮ್.ವಿ ಕಲಂ 133 ರಡಿಯಲ್ಲಿ ನೋಟೀಸು ಜಾರಿ ಮಾಡಿ ಅವರ ಉತ್ತರವನ್ನು ಪಡೆದುಕೊಂಡಿರುತ್ತೇನೆ. ನಂತರ 1 ಮತ್ತು 3 ನೇ ಆರೋಪಿತರಿಗೆ ಸಿ.ಆರ್.ಪಿ.ಸಿ ಕಲಂ 41(1)(ಎ) ಅಡಿಯಲ್ಲಿ ನೋಟೀಸು ಜಾರಿ ಮಾಡಿರುತ್ತೇನೆ. ಮಧ್ಯಾಹ್ನ 12.00 ಗಂಟೆಗೆ ಠಾಣೆಗೆ ಹಾಜರಾದ 1 ನೇ ಆರೋಪಿಯನ್ನು ದಸ್ತಗಿರಿ ನಿಯಮ ಪಾಲಿಸಿ ದಸ್ತಗಿರಿ ಮಾಡಿದ್ದು, ನಂತರ ಚಾಸಾ-9 ರವರ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ದ್ವಿಚಕ್ರ ವಾಹನದ ಮಾಲೀಕ 3 ನೇ ಆರೋಪಿಗೆ ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ ನಷ್ಟ ಭರ್ತಿ ಕರಾರನ್ನು ಪಡೆದುಕೊಂಡು ದ್ವಿಚಕ್ರ ವಾಹನ ಹಾಗೂ ಹೆಲ್ಮೇಟನ್ನು ಬಿಡುಗಡೆಗೊಳಿಸಿರುತ್ತೇನೆ. ನಂತರ ಅಟೋರಿಕ್ಷಾ ಮಾಲೀಕರ ಹೆಂಡತಿಗೆ ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ ನಷ್ಟ ಭರ್ತಿ ಕರಾರನ್ನು ಪಡೆದುಕೊಂಡು ಬಿಡುಗಡೆಗೊಳಿಸಿರುತ್ತೇನೆ. ಅದೇ ದಿನ ಮೃತರ ಉದಾರಾಂಗದ ಭಾಗಗಳನ್ನು ವಿಶ್ಲೇಷಣೆ ನಡೆಸಿ ವರದಿ ನೀಡುವಂತೆ ಚಾಸಾ-18 ರವರಿಗೆ ಚಾಸಾ-20 ರವರ ಮೂಲಕ ಎಫ್.ಎಸ್.ಎಲ್ ಗೆ ಕಳುಹಿಸಿ ಕೊಟ್ಟಿರುತ್ತೇನೆ. ಅದೇ ದಿನ

3 ನೇ ಆರೋಪಿಗೆ ದ್ವಿಚಕ್ರ ವಾಹನದ ಹೊಗೆ ತಪಾಸಣೆ ದೃಢಪತ್ರ ಇರುವುದಿಲ್ಲ ಎಂದು ನೋಟೀಸು ಜಾರಿ ಮಾಡಿರುತ್ತೇನೆ.

ದಿಃ 11-01-2023 ರಂದು ಚಾಸಾ-18 ರವರಿಂದ ಆರ್.ಎಫ್.ಎಸ್.ಎಲ್ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 23-01-2023 ರಂದು ಚಾಸಾ-16 ರವರಿಂದ 1 ನೇ ಆರೋಪಿಯ ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಚಾಸಾ-17 ರವರಿಂದ ಐ.ಎಮ್.ವಿ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-14 ರವರಿಂದ ಮೃತರ ಅಂತಿಮ ವೈದ್ಯಕೀಯ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ದೊಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-2, ನಿಪಿ-3, ನಿಪಿ-13, ನಿಪಿ-14 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-2(ಸಿ), ನಿಪಿ-3(ಸಿ), ನಿಪಿ-13(ಡಿ), ನಿಪಿ-14(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ರಿಂದ 12 ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು 3 ನೇ ಆರೋಪಿಗೆ ಐ.ಎಮ್.ವಿ ಕಲಂ 133 ರಡಿ ನೀಡಿದ ನೋಟೀಸು, ಅದಕ್ಕೆ ಪಡೆದುಕೊಂಡ ಉತ್ತರ, 3 ನೇ ಆರೋಪಿ ಹಾಗೂ ಮೃತರ ಹೆಂಡತಿ ಬರೆದುಕೊಟ್ಟ ನಷ್ಟ ಭರ್ತಿ ಕರಾರುಗಳು, 1 ನೇ ಆರೋಪಿಯ ಗಾಯದ ಪ್ರಮಾಣ ಪತ್ರ, ಎಫ್.ಎಸ್.ಎಲ್ ವರದಿ, ಪಿ.ಎಮ್.ವರದಿ, ಐ.ಎಮ್.ವಿ ವರದಿಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-18 ರಿಂದ 25 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-18(ಎ) ರಿಂದ 25(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸಬಹುದು.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ. ಆರ್.ಎಸ್. ವಕೀಲರಿಂದಃ</u>

ಅಪಘಾತ ಸ್ಥಳದಿಂದ ಪುರಸಭೆ ಕಚೇರಿಗೆ 2-3 ಕಿ.ಮೀ ದೂರ ಇದೆ. ನಿಪಿ-14 ರಲ್ಲಿ ಪುರಸಭಾ ಕಚೇರಿಗೆ ಸಂಬಂಧಪಟ್ಟ ಸಿ.ಸಿ.ಟಿ.ವಿ ದೃಶ್ಯಾವಳಿ ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿ. ಮುಂದುವರಿದು ಕಣ್ತಪ್ಪಿ ನಿಂದ ಆಗಿರುತ್ತದೆ. 3 ನೇ ಆರೋಪಿತನ ವಿರುದ್ಧ

ಐ.ಎಮ್.ವಿ. ಕಲಂ ಅಡಿ ಮಾತ್ರ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ. ಚಾಸಾ-4 ರವರ ಹೇಳಿಕೆಯ ಪ್ರಕಾರ ಮೃತರ ನಿರ್ಲಕ್ಷತನದಿಂದ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿ. ಚಾಸಾ-1 ಮತ್ತು ಚಾಸಾ-2 ರವರ ಹೇಳಿಕೆಗಳ ಪ್ರಕಾರ ಅಟೋ ರಿಕ್ಷಾ ಚಾಲಕ ಒಮ್ಮೆಲೆ ಬ್ರೇಕ್ ಹಾಕಿದ ಕಾರಣ ಅಟೋ ರಿಕ್ಷಾ ಪಲ್ಟಿಯಾಗಿರುತ್ತದೆ ಎಂದರೆ ಸರಿ. ಮುಂದುವರಿದು ನಮ್ಮ ತನಿಖೆಯಲ್ಲಿ ಬೈಕ್ ಸವಾರ ಒಮ್ಮೆಲೆ ಬಲಕ್ಕೆ ತಿರುಗಿದ್ದು ಕೂಡಾ ಅಪಘಾತಕ್ಕೆ ಕಾರಣವಾಗಿರುತ್ತದೆ ಎಂದು ಕಂಡುಬಂದಿರುತ್ತದೆ. ಚಾಸಾ-1 ಮತ್ತು 2 ರವರ ಹೇಳಿಕೆ ಪ್ರಕಾರ ಮೃತರ ಸಾವಿಗೆ ಅವರ ನಿರ್ಲಕ್ಷತನದ ಚಾಲನೆ ಕಾರಣವಾಗಿರುತ್ತದೆ ಎಂದರೆ ಸರಿಯಲ್ಲ. ಅಟೋರಿಕ್ಷಾ ಬೈಕಿಗೆ ಡಿಕ್ಕಿ ಪಡಿಸಿರುತ್ತದೆ ಎಂದರೆ ಸರಿ. ಅದಕ್ಕಾಗಿಯೇ ಅಟೋ ರಿಕ್ಷಾ ಹಾಗೂ ಬೈಕನ್ನು ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ ಎಂದರೆ ಸರಿ. ದೋಷರೋಪಣಾ ಪಟ್ಟಿಯ ಸಂಕ್ಷಿಪ್ತ ಸಾರಾಂಶದ ಪ್ರಕಾರ ಕಲಂ 304(ಎ) ಐ.ಪಿ.ಸಿ. ಮೃತನಿಗೆ ಅನ್ವಯವಾಗುತ್ತದೆ ಎಂದರೆ ಸರಿ. ಕಲಂ 304(ಎ) ಐ.ಪಿ.ಸಿ. 1 ಮತ್ತು 3 ನೇ ಆರೋಪಿತರಿಗೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿತನ ವಿರುದ್ಧ ಸಲ್ಲಿಸಿದ ದೋಷರೋಪಣಾ ಪಟ್ಟಿಗೆ ಕಾನೂನಿನ ಅಡಿಯಲ್ಲಿ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ನಾನು ಮಹಜರು ಮಾಡಿರುವುದಿಲ್ಲ, ನಕಾಶೆ ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಅಪಘಾತ ನಡೆದಿರುವುದಿಲ್ಲ ಹಾಗೂ ಚಾಸಾ-1 ಮತ್ತು ಚಾಸಾ-2 ರವರಿಗೆ ವಿಮಾ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.